# ಇಂದಿನ ದಿನ ಸುದಿನವಾಯಿತು

1. **Ref.:** Shri Purandara Dasara Sahitya Part – 3, Mahatmya Gnyana, edited by Shri Betageri Krishna Sharma and Shri Bengeri Huchha Rayaru, page No. 40.
2. **Note: Note:** This song is not available in the books of Prof. S.K.Ramachandra Rao and also in the books of Sri. Pavanje Guru Rao and also in the books of Gorebala Hanumantha Rayaru.
3. **Note:** Singer has followed these lyrics.
4. **Note:** Please refer the song: "madhvarAyara dEvatArchaneya prasiddha raghunAtharu pUjisuva sobagina ...... " ("ಮಧ್ವರಾಯರ ದೇವತಾರ್ಚನೆಯ ಪ್ರಸಿದ್ಧ ರಘುನಾಥರು ಪೂಜಿಸುವ ಸೊಬಗಿನ ...... ")

ರಾಗ: ಶಂಕರಾಭರಣ ತಾಳ: ರೂಪಕ

ಇಂದಿನ ದಿನ ಸುದಿನವಾಯಿತು ॥ ಪ ॥

ಇಂದಿರೇಶ ಮೂಲ ರಾಮಚಂದ್ರನ ಪದಕಮಲಗಳ ಸು-
ರೇಂದ್ರ ತೀರ್ಥ ಮುನಿಯು ತೋರಲು ॥ ಅಪ ॥

ಈತನ ಪದಕಮಲಗಳ ವಿಧಾತ ತನ್ನ ಭವನದೊಳಗೆ
ಸೀತೆಯ ಸಹ ಪೂಜಿಸಿ ಇಕ್ಷ್ವಾಕು ನೃಪನಿಗಿತ್ತನು
ಆತನನ್ವಯ ನೃಪರೆಲ್ಲರು ಪ್ರೀತಿಯಿಂದಲಿ ಭಜಿಸಿ ರಘು-
ನಾಥ ವೇದಗರ್ಭಗಿತ್ತ ಮೂರ್ತಿಯ ಪದಕಮಲ ಕಂಡೆ ॥ 1 ॥

ಗಜಪತಿ ಭಾಂಡಾರದಲ್ಲಿ ಅಜಕರ ಕಮಲಾರ್ಚಿತ ಭೂ -
ಮಿಜೆ ಸಹಿತದಿ ರಾಮನಿರಲು ನಿಜ ಜ್ಞಾನದಿ ತಿಳಿದು ಬೇಗ
ದ್ವಿಜ ವರಗುರುವೆನಿಸುತಿಪ್ಪ ಸುಜನ ವಂದಿತ ನರಹರಿ ಮುನಿ
ರಜನಿಯಲ್ಲಿ ತಂದ ಸುಲೋಹಜಮಯ ಪ್ರತಿಮೆಯನೆ ಕಂಡು ॥ 2 ॥

ಅಂದವುಳ್ಳ ಮೂಲ ರಾಮಚಂದ್ರನ ಪದಕಮಲಗಳನು
ವೃಂದಾರಕ ವೃಂದ ವಂದ್ಯನೆಂದೆನಿಸುವ ಪವನನಾ
ನಂದನ ಗುರು ಶ್ರೀಮದಾನಂದತೀರ್ಥರರ್ಚಿಸಿ ನಿಜ

ಅಂದದನ್ವಯದೊಳಿಟ್ಟ ಪುರಂದರ ವಿಠ್ಠಲನ ಕಂಡು ॥ 3 ॥

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿ:**

ವಿಜಯೀಂದ್ರರ ಗುರುಗಳಾದ ಸುರೇಂದ್ರ ತೀರ್ಥರು ಮಾಡಿದ ದೇವರ ಪೂಜೆಯನ್ನು ನೋಡಿ ಹಾಡಿದ ಹಾಡು.

೧. **ಸುರೇಂದ್ರ ತೀರ್ಥರು -** ರಾಯರ ಮಠದ ಪೀಠಸ್ಥರು. ಶ್ರೀ ವ್ಯಾಸರಾಯರ ಸಮಕಾಲೀನರು.
**ನಿಧಾತ** = ಬ್ರಹ್ಮ
**ತನ್ನ ಭವನ** = ಸತ್ಯಲೋಕ
**ಇಕ್ಷ್ವಾಕು : -** ವೈವಸ್ವತ ಮನುವಿನ ಹಿರಿಯ ಮಗ. ಸೂರ್ಯವಂಶದ ಮೂಲ ಪುರುಷ. ಅಯೋಧ್ಯೆ ಇವನ ರಾಜಧಾನಿ. ಈತನ ವಂಶದಲ್ಲಿ ಮುಂದೆ ಶ್ರೀ ರಾಮಚಂದ್ರನು ಹುಟ್ಟಿದನು.
**ಅನ್ವಯ** = ವಂಶ
**ವೇದಗರ್ಭ** = ಬ್ರಹ್ಮ
**ವಿ.ಸೂ. : -** ಶ್ರೀಮದಾನಂದ ತೀರ್ಥರಿಂದ ಪೂಜೆಗೊಂಡ ಮೂಲ ರಾಮ, ಸೀತಾ ಮತ್ತು ಲಕ್ಷ್ಮಣ ಈ ಮೂರ್ತಿಗಳ ಪೌರಾಣಿಕ ಕಥೆ ಹೀಗಿದೆ:
ಬ್ರಹ್ಮದೇವರು ಈ ಮೂರ್ತಿಗಳನ್ನು ಅನೇಕ ಕಾಲ ಸತ್ಯಲೋಕದಲ್ಲಿ ಪೂಜಿಸಿ ಸೂರ್ಯವಂಶದ ಇಕ್ಷ್ವಾಕು ರಾಜನಿಗೆ ಕೊಟ್ಟರು. ಮುಂದೆ ಆತನ ವಂಶದ ರಾಜರೆಲ್ಲರೂ ಪೂಜೆಮಾಡುತ್ತ ಬಂದು, ಶ್ರೀ ರಾಮಚಂದ್ರನು ಆ ಮೂರ್ತಿಗಳನ್ನು ಮರಳಿ ಬ್ರಹ್ಮನಿಗೆ ಕೊಟ್ಟನು.

೨. **ಗಜಪತಿ** = ಕಳಿಂಗ (ಒರಿಸಾ)ದೇಶದ ಅರಸರು
**ಅಜ** = ಬ್ರಹ್ಮ
**ಭೂಮಿಜಾ** = ಸೀತ ದೇವಿ, (ಜನಕರಾಜನು ಯಜ್ಞಕ್ಕಾಗಿ ನೆಲವನ್ನು ರಂತೆಯಿಂದ ಹರಗುವಾಗ ದೊರೆತಳು).
**ನರಹರಿ ಮುನಿ** = (೧೨೪೧ - ೧೩೩೩) ಇವರು ಕಳಿಂಗ ದೇಶದಲ್ಲಿ ಮಂತ್ರಿಯಾಗಿದ್ದು, ಅಲ್ಲಿಂದ ಬರುವಾಗ ಧಾತು ನಿರ್ಮಿತವಾದ ರಾಮ-ಸೀತೆ-ಲಕ್ಷ್ಮಣರ ಮೂರ್ತಿಗಳನ್ನು ಕಳಿಂಗ ದೇಶದ ಬೊಕ್ಕಸದಿಂದ ತಂದು, ಆನಂದತೀರ್ಥರಿಗೆ ಅರ್ಚನೆಗಾಗಿ ಕೊಟ್ಟರು. ಇವರು ಪದ್ಮನಾಭ ತೀರ್ಥರ ಬಳಿಕ ಮಠದ ಪೀಠವೇರಿದರು(೧೩೨೪).
**ರಜನಿ** = ರಾತ್ರಿ

೩. **ವೃಂದಾರಕ** = ದೇವತೆಗಳು
**ಪವನ ನಂದನ** = ಹನುಮಂತ (ವಾಯುಪುತ್ರನಾದ ಹನುಮಂತನ ಅವತಾರವೆಂದೆನಿಸುವ)
**ಅನ್ವಯ** = ವಂಶ

**ಹಾಡು ರಚಿಸಿದ ಸಂದರ್ಭ:**

ಬಹಳ ಅಪೂರ್ವವಾದ ಸನ್ನಿವೇಶ. ಯತಿದ್ವಯರ ಮಿಲನ ........
ಶ್ರೀವ್ಯಾಸರಾಜರು - ಶ್ರೀಸುರೇಂದ್ರತೀರ್ಥರು - ಶ್ರೀಪುರಂದರದಾಸರು - ಶ್ರೀಕನಕದಾಸರು
ಶ್ರೀಕೃಷ್ಣದೇವರಾಯ - ವಿಜಯನಗರದ ಅರಸರು

ಶ್ರೀವ್ಯಾಸರಾಯ ಗುರುಗಳು ಮತ್ತು ಶ್ರೀಕೃಷ್ಣದೇವರಾಯನ ರಾಜಮರ್ಯಾದೆಯೊಂದಿಗೆ ಭವ್ಯ ಮೆರವಣಿಗೆಯಲ್ಲಿ ವಿಜಯನಗರದಲ್ಲಿ ವ್ಯಾಸರಾಯರ ಮಠ ಲೋಕಪಾವನಕ್ಕೆ ಕರೆದುಕೊಂಡು ಬರುತ್ತಾರೆ. ಶ್ರೀಗಳವರು ಲೋಕಪಾವನ ಮಠಕ್ಕೆ ಬಂದಮೇಲೆ ಕೃಷ್ಣದೇವರಾಯನು ಅವರ ಅಪ್ಪಣೆ ಪಡೆದು ತನ್ನ ಅರಮನೆಗೆ ಹಿಂದಿರುಗುತ್ತಾನೆ.

ಈ ಇಬ್ಬರು ಯತಿಗಳ ಸಮ್ಮಿಲನದ ಬಗ್ಗೆ ಅಲ್ಲೇ ಇದ್ದ ಶ್ರೀಪುರಂದರದಾಸರು ಮತ್ತು ಶ್ರೀಕನಕದಾಸರು ಪರಸ್ಪರ ನಸುನಕ್ಕು"ನಮ್ಮ ಸುದೈವ ಇಂದು ಈರ್ವರು ಅಪರೋಕ್ಷಜ್ಞಾನಿಗಳು ಒಟ್ಟಿಗೇ ಸೇರಿದ್ದನ್ನು ಕಾಣುವ ಪುಣ್ಯಮಾಡಿದ್ದೇವಲ್ಲವೇ" ಎಂದು ಅತೀವ ಆನಂದ ವ್ಯಕ್ತಪಡಿಸಿದರು. ಇಬ್ಬರು ಯತಿಗಳು ಒಟ್ಟಿಗೇ ಸೇರಿದಾಗ ಅನುಭವಿಸಿದ ಆನಂದವನ್ನು ನಾವೂ ಅನುಭವಿಸಲೇಬೇಕು.

ಶ್ರೀವ್ಯಾಸರಾಯರು, ಶ್ರೀಸುರೇಂದ್ರತೀರ್ಥರ ವ್ಯಕ್ತಿತ್ವದ ಬಗ್ಗೆ ಬಹಳ ಆಕರ್ಷಿತರಾಗಿದ್ದರು. ಈಗ ಸುರೇಂದ್ರತೀರ್ಥರ ವಿನಯದ ಸ್ವಭಾವವನ್ನು ನೋಡಿ ವ್ಯಾಸರಾಯರ ಹೃದಯ ತುಂಬಿ ಬಂದು ಆನಂದ ಭಾಷ್ಪ ಹರಿಯಿತು . ಪ್ರೀತಿಯ ಭಾವವೇಶದಲ್ಲಿಯೇ - "ನಾವಿಬ್ಬರೂ ಶ್ರೀಮದಾಚಾರ್ಯರ ಮಹಾ ಸಂಸ್ಥಾನಾಧಿಪತಿಗಳಲ್ಲವೇ? ನಮ್ಮದು ಅಣ್ಣತಮ್ಮಂದಿರ ಪೀಠಗಳು. ಅಣ್ಣನಿದ್ದಲ್ಲಿ ತಮ್ಮನೂ, ತಮ್ಮನಿದ್ದಲ್ಲಿ ಅಣ್ಣನೂ ಬರಬಹುದು ಸಹಜವಷ್ಟೇ - ಎಂದು ಅಂತ:ಕರಣದಿಂದ ಮಾತನಾಡುತ್ತಾರೆ. ಹೀಗೆ ಶ್ರೀವ್ಯಾಸರಾಯರು ಸುರೇಂದ್ರತೀರ್ಥರ ಆಗಮನದಿಂದ ತಮ್ಮ ಸಂತೋಷವ್ಯಕ್ತ ಪಡಿಸುತ್ತಾರೆ.
ಶ್ರೀಕೃಷ್ಣದೇವರಾಯನು ಶ್ರೀಸುರೇಂದ್ರತೀರ್ಥರಿಗೆ ನಮಸ್ಕರಿಸಿ ಹದಿನೈದು ವರ್ಷಗಳ ಹಿಂದೆ ಶ್ರೀಸುರೇಂದ್ರತೀರ್ಥರು ವಿಜಯನಗರಕ್ಕೆ ಬಂದು ಸಂಸ್ಥಾನ ದೇವರಾದ ಶ್ರೀಮೂಲರಾಮದೇವರ ಪೂಜೆಯನ್ನು ಮಾಡಿ ಎಲ್ಲರನ್ನೂ ಆಶೀರ್ವದಿಸಿ ಹೋಗಿದ್ದ ವಿಷಯವನ್ನು ಸ್ಮರಿಸಿಕೊಳ್ಳುತ್ತಾನೆ. ಆಗ ಗುರುಗಳು ಬಂದಾಗ ಮೂಲರಾಮದೇವರ ಪೂಜೆಯನ್ನು ನೆರವೇರಿಸಿ ನಮ್ಮ ರಾಜ ಪ್ರತಿನಿಧಿಗಳು ನಿಮ್ಮ ಸಂಸ್ಥಾನ ಪೂಜೆಯಲ್ಲಿ ಭಾಗವಹಿಸಿ ನಮ್ಮ ವಿಜಯಕ್ಕಾಗಿ ಶ್ರೀಮೂಲರಾಮದೇವರಲ್ಲಿ ಪ್ರಾರ್ಥಿಸಿ
ಆಶೀರ್ವದಿಸಿದ್ದಿರಿ. ತಮ್ಮ ಆಶೀರ್ವಾದದಿಂದ ಮತ್ತು ಗುರುಗಳಾದ ಶ್ರೀವ್ಯಾಸರಾಜ ಗುರುಗಳ ಆಶೀರ್ವಾದದಿಂದ ನಮಗೆ ಅಖಂಡ ಜಯ ದೊರಕಿತು. ಹಿಂದೆ ನಮ್ಮ ರಾಜಪ್ರತಿನಿಧಿಗಳು ನಿಮ್ಮನ್ನು

ಗೌರವಿಸುವ ಭಾಗ್ಯವನ್ನು ಪಡೆದಿದ್ದರು, ಈಗ ನಾವು ಸ್ವತ: ತಮ್ಮನ್ನು ಗೌರವಿಸಿ ತಮ್ಮ ಅನುಗ್ರಹ ಪಡೆಯಲು ಬಂದಿದ್ದೇವೆ ಎಂದು ಕೃಷ್ಣದೇವರಾಯನು ಶ್ರೀಸುರೇಂದ್ರತೀರ್ಥರ ಬಳಿ ಬಿನ್ನವಿಸಿಕೊಳ್ಳುತ್ತಾನೆ.

ಮಾರನೆಯ ದಿನ ದ್ವಾದಶಿ, ಇಬ್ಬರು ಯತಿಗಳ ಸಂಸ್ಥಾನ ಪೂಜೆಯಾದಮೇಲೆ ಶ್ರೀಸುರೇಂದ್ರ ತೀರ್ಥರು ತಮ್ಮ ಸಂಸ್ಥಾನ ದೇವರುಗಳನ್ನು ಶ್ರೀವ್ಯಾಸರಾಯತೀರ್ಥರು, ಅವರ ಶಿಷ್ಯರಿಗೆ ಹಾಗೂ ಕೃಷ್ಣದೇವರಾಯನಿಗೆ ದರ್ಶನ ಮಾಡಿಸಿದರು. "ಶ್ರೀಗಳವರು ದೇವರ ದರ್ಶನಮಾಡಿಸುತ್ತಿರುವಾಗ ಶ್ರೀಪುರಂದರದಾಸರು ಶ್ರೀಮೂಲರಾಮಚಂದ್ರ ದೇವರ ಮೇಲೆ ಕೀರ್ತನೆಯನ್ನು ರಚಿಸಿ ಹಾಡುತ್ತಾರೆ". ಆ ದೇವರನಾಮ ಹೀಗಿದೆ

**ಇಂದಿನ ದಿನ ಸುದಿನವಾಯಿತು ॥ ಪ ॥**
**ಇಂದಿರೇಶ ಮೂಲ ರಾಮಚಂದ್ರನ ಪದಕಮಲಗಳ ಸು-**
**ರೇಂದ್ರ ತೀರ್ಥ ಮುನಿಯು ತೋರಲು ॥ ಅಪ ॥**

ಕೀರ್ತನೆ ಮುಕ್ತಾಯದಲ್ಲಿ ಪುರಂದರವಿಠಲನ ಸುರೇಂದ್ರ ಮುನಿಪ ತಂದು ತೋರಲು....ಎಂದು ಮುಗಿಸಿದ್ದಾರೆ.""

ಶ್ರೀಮೂಲರಾಮರ ಇತಿಹಾಸವನ್ನು ನಿರೂಪಿಸಿದ ಈ ಕೀರ್ತನೆಯನ್ನು ಆಲಿಸಿ ಎಲ್ಲರೂ ಬಹಳ ಆನಂದ ಪಟ್ಟರು. ಕನಕದಾಸರು ನಗುತ್ತಾ"ದಾಸರೇ, ಶ್ರೀಸುರೇಂದ್ರತೀರ್ಥ ಗುರುಗಳು ದೇವರ ಇತಿಹಾಸವನ್ನು ಶ್ರೀಕೃಷ್ಣದೇವರಾಯರಿಗೆ ತಿಳಿಸಬೇಕೆಂದಿದ್ದರು. ಅವರು ತಿಳಿಸುವ ಮೊದಲೇ ನೀವೇ ಕೀರ್ತನೆ ಮೂಲಕ ತಿಳಿಸಿಬಿಟ್ಟಿರಲ್ಲ "ಎಂದರು.

ಕನಕದಾಸರು ಹೇಳಿದ ಮಾತನ್ನು " ಶ್ರೀವ್ಯಾಸರಾಜರ ಮತ್ತು ಶ್ರೀಸುರೇಂದ್ರತೀರ್ಥರು ನಸುನಗುತ್ತಾರೆ". ಅಪರೋಕ್ಷ ಜ್ಞಾನಿಗಳು ಸೇರಿದಾಗ ಇಂತಹ ಸ್ವಾರಸ್ಯಕರ ಘಟನೆಗಳು ನಡೆಯುವುದು ಸ್ವಾಭಾವಿಕವಷ್ಟೆ. ಮುಂದೆ ಉಭಯಶ್ರೀಗಳವರು ಸರ್ವರಿಗೂ ತೀರ್ಥಪ್ರಸಾದವನ್ನು ಕರುಣಿಸಿ, ಪಂಡಿತ ಮಂಡಳಿಯೊಡನೆ ಕುಳಿತು ತತ್ವಾರ್ಥ ವಿಚಾರ ಮಾಡುತ್ತಾ ತಾವೂ ಭಿಕ್ಷಾ ಸ್ವೀಕಾರ ಮಾಡಿದರು. ನಂತರ ಶ್ರೀಕೃಷ್ಣದೇವರಾಯರಿಗೆ ಉಭಯ ಶ್ರೀಗಳು ತೀರ್ಥ ಪ್ರಸಾದ ಕರುಣಿಸಿದರು.

ಮುಂದೆ ಶ್ರೀಸುರೇಂದ್ರತೀರ್ಥರು ಶ್ರೀವ್ಯಾಸರಾಯ ರೊಂದಿಗೆ ಮಾತನಾಡುತ್ತಿದ್ದಾಗ ,ಶ್ರೀಸುರೇಂದ್ರತೀರ್ಥರು ಶ್ರೀವಿಷ್ಣುತೀರ್ಥರ ಹತ್ತಿರ ತಿರುಗಿನೋಡಿ, ವ್ಯಾಸರಾಯರಿಗೆ "ಶ್ರೀಮೂಲರಾಮ ದೇವರು ಒಬ್ಬ ವ್ಯಕ್ತಿಯನ್ನು ಅಪೇಕ್ಷಿದ್ದಾನೆ" ಎಂದು ಹೇಳಿದರು. ಶ್ರೀವ್ಯಾಸರಾಜರು

ನಸುನಕ್ಕು"ಮೂಲರಾಮನಿಗಾಗಿ ಯೇತ ಯಾರು ಮಾಡಿದ್ದಾನೆ ಗೋಪಾಲಕೃಷ್ಣ, ಖಂಡಿತಾ ಅವನಿಚ್ಚೆ ಗೋಪಾಲಕೃಷ್ಣ ಕೊಡುತ್ತಾನೆ ಎಂದರು.
ಇವರಿಬ್ಬರ ಮಾತುಗಳು ಬೇರೆಯವರಿಗೆ ಅರ್ಥವಾಗಲಿಲ್ಲ. ವ್ಯಾಸರಾಯರು ಕೃಷ್ಣದೇವರಾಯನಿಗೆ ನಮ್ಮ ಸುರೇಂದ್ರತೀರ್ಥರು ನಮಗೆ ಪ್ರಾಣಪದಕದಂತಿರುವ ವಿಷ್ಣುತೀರ್ಥರನ್ನು ಅಪೇಕ್ಷಿಸಿದ್ದಾರೆ. ಇವರನ್ನು ಶ್ರೀಸುರೇಂದ್ರತೀರ್ಥರಿಗೆ ಅವರ ಶಿಷ್ಯರನ್ನಾಗಿ ಒಪ್ಪಿಸಬೇಕು ಎಂದು ಹೇಳುತ್ತಾರೆ. ಹೀಗೆ ಶ್ರೀವ್ಯಾಸರಾಯ ಗುರುಗಳ ಬಳಿ ಶಿಷ್ಯರಾಗಿದ್ದ ವಿಷ್ಣುತೀರ್ಥರು ಶ್ರೀಸುರೇಂದ್ರತೀರ್ಥರ ಶಿಷ್ಯರಾಗಿ ಶ್ರೀವಿಜಯೀಂದ್ರತೀರ್ಥರಾಗಿ ಉದಯಿಸುತ್ತಾರೆ.

"ಈ ಭಾಗದಲ್ಲಿ ಶ್ರೀವ್ಯಾಸರಾಜಗುರುಗಳು, ಶ್ರೀಸುರೇಂದ್ರತೀರ್ಥಗುರುಗಳು, ಶ್ರೀಪುರಂದರದಾಸರು, ಶ್ರೀಕನಕದಾಸರು ಶ್ರೀವಾದಿರಾಜ ಗುರುಗಳು, ಶ್ರೀವಿಜಯೀಂದ್ರತೀರ್ಥರು ಶ್ರೀನಿವಾಸತೀರ್ಥರು ಎಲ್ಲ ಗುರುಗಳನ್ನೂ, ಅವರ ಸ್ಮರಣೆಮಾಡಿದಂತಾಯ್ತು. ಶ್ರೀವ್ಯಾಸರಾಯ ಗುರುಗಳ ಮತ್ತು ಶ್ರೀಸುರೇಂದ್ರತೀರ್ಥ ಗುರುಗಳಿಬ್ಬರಿಗೂ ಒಬ್ಬರನ್ನೊಬ್ಬರು ಮಿಲನವಾದಾಗ ಅನುಭವಿಸಿದ ಸಂತಸದ ಕ್ಷಣಗಳು ಅವಿಸ್ಮರಣೀಯ. ಶ್ರೀಪುರಂದರದಾಸರು ಮತ್ತು ಶ್ರೀಕನಕದಾಸರು ಇಬ್ಬರು ಗುರುಗಳನ್ನು ಕಂಡಾಗ ಆದ ಆನಂದ ವರ್ಣಿಸಲಸದಳ".

ಎಲ್ಲಾ ಯತಿವರೇಣ್ಯರಿಗೂ,ಹರಿದಾಸರುಗಳಿಗೂ ಭಕ್ತಿಯ ನಮನಗಳನ್ನು ಸಲ್ಲಿಸೋಣ.

**Classification:** Keerthane
**Ankita:** purandara vittala
**Location:** NA
**Category:** mahatmya jnana,
**Sub-Category:** rama, padma, muni, madhwa, sita, puje, arasa, priti, bhajane, brahma, jnana, narahari, Hanuma,
**Pravachana:** NA
**Explanation:** NA